(*e*) Yes.

(*f*) 6799 acres 04 guntas (determined) 3389 acres 22 guntas (distributed).

PAPERS LAID ON THE TABLE

SRI D. DEVARAJ URS (Chief Minister).—I lay on the Table of the House.—

"Notification No. DPAR 9 IFP 76 dated 5th June 1978.—

The Karnataka State Civil Services (Regulation of Promotion, Pay and Pension) Rules, 1978,
under section 9A(2) of the Karnataka State Civil Services (Regulation of Promotion, Pay and Pension) Act, 1973."

SRI S. M. YAHYA (Minister for Finance).—Sir, I lay on the Table of the House.—

"Notification No. FD 69 CSL 77 (PF) dated 29th June, 1978. Reduction of Sales Tax in respect of Certain goods sold by N.G.E.F. to Kudremuk Iron Ore Ltd."

MR. SPEAKER.—All the Papers are laid.

CALLING ATTENTION TO MATTERS OF URGENT PUBLIC IMPORTANCE

re: Scarcity of cement particularly in Bangalore

ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ).—ಸ್ವಾಮಿ, ಸಿಮೆಂಟ್ ಕೊರತೆಯು ಬಗ್ಗೆ ನಾಗರೀಕರಿಗೆ ಆಗುತ್ತಿರತಕ್ಕ ತೊಂದರೆಗಳ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ನಾನು ಪ್ರತಿಸಾರಿಯೂ ಕನ್ನಡದಲ್ಲಿ ಪ್ರಶ್ನೆಗಳನ್ನು ಬರೆದು ಕಳುಹಿಸಿದರೆ, ನನಗೆ ಇಂಗ್ಲೀಷ್‌ನಲ್ಲಿ ಉತ್ತರ ಕಳುಹಿಸುತ್ತಿದ್ದಾರೆ. ನಾನು ಇದರ ಬಗ್ಗೆ ಧರಣಿ ಮಾಡ ಬೇಕಾಗುತ್ತದೆ.

SRI AZEEZ SAIT (Minister for Industries).—Sir, there is .....

SRI MALLUR ANANDA RAO.—Sir, I protest. Let the Hon'ble Minister reply in Kannada.

MR. SPEAKER.—In this connection, I would like to draw the attention of the hon.members to section 5 of the Mysore Official Language Act, 1963, which reads as follows.—

"5. CONTINUANCE OF ENGLISH FOR USE IN LEGISLATURE.—Notwithstanding the expiration of the period of fifteen years from the commencement of the Constitution, the

English language may, as from the twenty-sixth day of January 1965, continue to be used, in addition to Kannada and Hindi for the transaction of business in the Legislature of the State."

I also wish to invite attention of the hon. members to L.A. Debates-Vol. I, 27th December, 1956-page 313, wherein the then Speaker has observed as follows.—

"If a member putting question in Telugu does not understand the reply given in Kannada or in English, the Chair has no remedy. But, as far as possible, if the member putting the question knows Kannada or English it is much better that he puts the question in English or in Kannada."

SRI MICHAEL B, FERNANDES.—Sir, I have been begging of you to give a chance to me to say something on this subject

ಅಧ್ಯಕ್ಷರು.—ರೂಲ್ಸ್ ಆಂಡ್ ಪ್ರೊಸೀಜರನ್ನು ದಯವಿಟ್ಟು ಫಾಲೋ ಮಾಡಿ. ಕಾಲಿಂಗ್ ಅಟೆನ್‌ಷನ್ ಕೇಳಿದ್ದಾರೆ. ಈ ಸಂದರ್ಭದಲ್ಲಿ ಬೇರೆ ಕಡೆಗೆ ಅಟೆನ್‌ಷನ್ ನನ್ನು ಡೈವರ್ಟ್ ಮಾಡಿದರೆ ಹೇಗೆ? We have to follow the rules. I request all the hon. members to respect the rules.

Sri MICHAEL B. FERNANDES.-This is very unfair to me sir.

10-00 A.M.

ಶ್ರೀ ಮಳ್ಳೂರು ಆನಂದರಾವ್.—ಬೇಲಿಯೇ ಎದ್ದು ಹೊಲ ಮೇಯುವ ಸ್ಥಿತಿ ಆದರೆ ಹೇಗೆ ?

MR. SPEAKER.-We have to respect the Constitution.

ಶ್ರೀ ಮಳ್ಳೂರು ಆನಂದರಾವ್.—ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಹೇಳಿರುವ ಸರ್ಕಾರದವರೇ ಹೀಗೆ ಮಾಡಿದರೆ ಹೇಗೆ ?

ಅಧ್ಯಕ್ಷರು.—ಅವರು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಆನಂದರಾವ್‌ರವರು ಒಂದು ಆಂಶವನ್ನು ಎತ್ತಿದರು.

SRI MICHEAL B. FERNANDES.-It is a matter of privilege sir.

SRI MALLUR ANANDA RAO.-The answer should be either in English or Kannada.

ಅಧ್ಯಕ್ಷರು—ಕಾನ್ಸಿ ಟ್ಯೂಷನ್‌ಗೆ ನಾವು ನೀವು ಎಲ್ಲರೂ ಬೆಲೆ ಕೊಡಬೇಕು.

ಶ್ರೀ ಮಳ್ಳೂರು ಆನಂದರಾವ್—ಕನ್ನಡದಲ್ಲಿ ಪ್ರಶ್ನೆ ಕೇಳಿರುವಾಗ ಕನ್ನಡದಲ್ಲೇ ಉತ್ತರ ಕೊಡಬೇಕೋ ಬೇಡವೋ ? ಕೆಲವು ದಿನಗಳ ಹಿಂದೆ ಮಾನ್ಯ ಗುಂಡೂರಾವ್‌ರವರು ಕನ್ನಡದಲ್ಲಿ ಸೂಚನೆ ಕೊಟ್ಟಾಗ ಕನ್ನಡದಲ್ಲಿಯೇ ಉತ್ತರಿಸಿದರು ಅದೇ ರೀತಿ ಇಂದು ಮಾನ್ಯ ಸದಸ್ಯರು ಕನ್ನಡದಲ್ಲಿ ಪ್ರಶ್ನೆ ಕೇಳಿರುವುದರಿಂದ ಮಾನ್ಯ ಮಂತ್ರಿಗಳೂ ಸಹ ಕನ್ನಡದಲ್ಲೇ ಉತ್ತರ ಹೇಳಲಿ.

ಅಧ್ಯಕ್ಷರು—ಈಗತಾನೇ ಕಾನ್ಸಿ ಟ್ಯೂಷನ್ನನ್ನು ಓದಲಿಲ್ಲವೆ ?

ಶ್ರೀ ಮಳ್ಳೂರು ಆನಂದರಾವ್—ನಮಗೆ ಭಾಷೆಯ ಬಗ್ಗೆ ದುರಭಿಮಾನ ಇಲ್ಲ. ಆದರೆ ಮಾನ್ಯ ಪ್ರಭಾಕರ್ ರವರು ಇಂಗ್ಲೀಷ್‌ನಲ್ಲಿ ಶುರು ಮಾಡಿದ್ದಕ್ಕೆ ಕನ್ನಡದಲ್ಲಿ ಹೇಳಬೇಕೆಂದು ಒತ್ತಾಯ ಮಾಡಿ ಬಾಯಿಮುಚ್ಚಿಸಿದರು. ಭಾಷೆಯ ಬಗ್ಗೆ ಅಭಿಮಾನ ಇರುವುದು ಈ ವಿಷಯದಲ್ಲಿ ಅಲ್ಲ. ಈಗ ನಾವು ಕನ್ನಡದಲೇ ಹೇಳಿ ಎನ್ನುತ್ತಿರುವಾಗ ಆಡಳಿತ ಪಕ್ಷದವರ ಉತ್ತರವೇ ಇಲ್ಲ.

ಅಧ್ಯಕ್ಷರು—ನಾನು ಆ ಬಗ್ಗೆ ರೂಲಿಂಗ್ ಸಹ ಕೊಡುತ್ತಿದ್ದೇನೆಂದು ಹೇಳುತ್ತಿರುವಾಗ ತಾವು ಏಕೆ ಶಾಂತಿಯಿಂದ ಇರಬಾರದು ?

ಶ್ರೀ ಮಳ್ಳೂರು ಆನಂದರಾವ್—ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸದಸ್ಯರು ಕನ್ನಡದಲ್ಲಿ ಪ್ರಶ್ನೆಯನ್ನು ಕಳುಹಿಸಿರುವಾಗ ಮಾನ್ಯ ಮಂತ್ರಿಗಳೂ ಕೂಡ ಕನ್ನಡದಲ್ಲಿಯೇ ಉತ್ತರವನ್ನು ಕಳುಹಿಸಬೇಕು ಎಂದು.

ಅಧ್ಯಕ್ಷರು—ಅದು ತಮ್ಮ ಅಭಿಪ್ರಾಯ. ಆದರೆ ಅದಕ್ಕೆ ಸಂಬಂಧಪಟ್ಟ ರೂಲ್ಸನ್ನು ನೋಡಿ ಅದರಂತೆ ನಡೆದುಕೊಳ್ಳಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ—ಆ ಪ್ರಶ್ನೆಯಲ್ಲ. ಮಾನ್ಯ ಮಂತ್ರಿಗಳಾದ ಪ್ರಭಾಕರ್‌ರವರು ಇಂಗ್ಲೀಷಿನಲ್ಲಿ ಉತ್ತರ ಕೊಡುವಾಗ ಕನ್ನಡದಲ್ಲಿ ಉತ್ತರ ಕೊಡಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಪ್ರತಿಭಟಿಸಿ ಉತ್ತರ ಕೊಡದಂತೆ ಮಾಡಿದರು. ಈಗ ನಾವು ಕನ್ನಡದಲ್ಲಿ ಕೊಡಬೇಕೆಂದು ಕೇಳುತ್ತಿರುವಾಗ ಏಕೆ ಆ ಸದಸ್ಯರುಗಳು ಮೌನವಾಗಿ ಕುಳಿತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್—ನೀವು ಮಾತನಾಡುವಾಗ ಅವರೆಲ್ಲ ಮೌನವಾಗಿ ಕುಳಿತಿರುತ್ತಾರೆ ! ಅದೇಕೆ ಹಾಗೆ ಮಾಡುತ್ತಾರೆ ?

(ಈ ಸಂದರ್ಭದಲ್ಲಿ 4-5ಮಂದಿ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡತೊಡಗಿದರು)

ಅಧ್ಯಕ್ಷರು—ನಾನು ಕರೆದಾಗ ತಾವು ಮಾತನಾಡಬೇಕು, ಅಥವಾ ಮಾತನಾಡಬೇಕೆಂದು ಕೈಯೆತ್ತಿ ಸೂಚನೆ ಕೊಡಬೇಕು. ಅದನ್ನು ಬಿಟ್ಟು ಒಟ್ಟೊಟ್ಟಿಗೆ ಎಲ್ಲರೂ ನಿಂತು ಸ್ವಿಚ್ ಹಾಕಿಕೊಂಡು ಭಾಷಣ ಮಾಡುತ್ತಾ ಹೋದರೆ ತಮಗೆ ಗೌರವ ಬರುವುದಿಲ್ಲ. ದಯವಿಟ್ಟು ಈ ಅಭ್ಯಾಸವನ್ನು ಬಿಟ್ಟುಬಿಡಿ.

SRI MICHAEL B. FERNANDES.—A born Kannadiga who is proficient in Kannada puts a question in Kannada and gets an answer in English then it is regrettable. The position that you just now read out with regard to the constitution and some other ruling in regard to Telugu not being understood, very clearly shows that a person who puts aquestion in a particular language has a right to get a reply in the same langauge in which he has put the question. If the concerned Minister is unable to answer in the language of the member then other members can prevent the reply being given in another language. I would say that it becomes a matter of privilege and that is set at naught by this House. I would therefore request that if a question is put in a particular language the answer should be given in the same language. Kannada is considered as the official language of our State. Marathi is not considered as the official language of our State. I feel that the House is adopting double standards. You may kindly give a ruling in this regard. We are having bilingual proceedings. I know all Ministers know English and Kannada.

SRI D. DEVARAJ URS.—The constitutional position in regard to the language as quite clear. The principle has already been laid in the constitution. The hon. member cannot insist for an answer in a particular language. There is no point in quarrelling over this issue. The hon. member can request the concerned Minister to speak in English or Kannada.

ಶ್ರೀ ಪಿ. ರಾಮುದೇವ್.—ಈ ಮನೆಯಲ್ಲಿ ಮೊದಲನೆ ಸ್ಥಾನ ಕನ್ನಡಕ್ಕೆ ಸಿಗಬೇಕು. ಈ ಕನ್ನಡ ಕ್ಷೇತ್ರದ ಹತ್ತಾರು ವರ್ಷಗಳಿಂದ ಹೋರಾಟ ಮಾಡಿದ್ದೇವೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಸರ್ಕಾರದವರು ಒಪ್ಪಿಕೊಂಡಿರುವಾಗ ಇಂಗ್ಲೀಷಿಗೆ ಮೊದಲನೆಯ ಸ್ಥಾನ ಸಿಗಬೇಕೆಂದರೆ ಅದನ್ನು ಖಂಡನೆ ಮಾಡಬೇಕು.

ಅಧ್ಯಕ್ಷರು—ರೂಲ್ಸ್ ಏನಿದೆ ಅದರ ಪ್ರಕಾರ ನಾವು ನಡೆದುಕೊಳ್ಳಬೇಕು.

SRI C. M. ARUMUGAM.—I raise a point of order sir.

(Three members were seen standing)

MR. SPEAKER.—The point of order cannot be allowed if three members are standing at a time.

SRI C. M. ARMUGAM.—I am speaking on a point of order sir. I have great respect of the members expressing their sentiments for the Kannada language. This controversy started when hon. Minister Sri K. Prabhakar could not reply or satisfy the MES members. That is a political issue, I will leave it at that. While my hon. friend Sri Michael Fernandes submitting his views, he said that the House is adopting double standard.

SRI MICHEAL FERNANDES.—I meant to say that the Government is adopting double standard not the House.

SR. C. M. ARUMUGAM.—The Chief Minister is there to safegaurd the Government's decision. The hon, member may kindly have some patience. What I am submiting is that the hon. member in his enthusiasm must have said it. He can say that the Government is adopting double standards. We cannot for a moment say.....

(SRI MICHAEL B. FERNANDES Stood up to speak)

Mr. Speaker.—I request the hon. member not to get up and talk, He may kindly avoid this habit. It is not fair to disturb another Member while he is talking.

Sri C. M. Armugam,—Let me say one thing, Everyone of us must be jealous to protect the diginity and decorum of this House. Therefore this is the concern of the House. I am not concerned with the Ruling party, Opposition party, Janatha party, or any other party, but I am concerned with what my friend Sri Fernandes said that the House is adopting double standards ; that is a reflection against the entire House and it should be construed as a breach of privilege. Therefore you cannot for a moment bring any discredit or disrespect for this House stating that the House is adopting double standards. We also constitute a part of the House. It may be for the working convenience we have got Opposition and Ruling party. But so far as the House is concerned, the House is supreme and nobody can pass any aspersions on the House, There-

fore, you can call for the report as to the correctness of what Mr. Fernandes said in this connection. I once again say that he has used the words "House adopting double standards" which amount to a breach of privilege of the House. I want a Ruling from the Chair in this matter.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಮಾನ್ಯ ಸ್ನೇಹಿತರಾದ ಶ್ರೀ ಫರ್ನಾಂಡಿಸ್ ರವರು ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಹೇಳಿದರು. ನಾನು ಅದನ್ನು ಪ್ರತಿಪಾದಿಸುತ್ತೇನೆ. ಹಾಗೂ ಬೆಂಬಲಿಸುತ್ತೇನೆ ಸ್ವಾಮಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಇಂಗ್ಲೀಷಿನಲ್ಲಿ ಪ್ರಶ್ನೆ ಕೇಳಿದ್ದಕ್ಕೆ ಸರ್ಕಾರದವರು ಇಂಗ್ಲೀಷಿನಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಿದ್ದರೆ ಇಂಗ್ಲೀಷಿನಲ್ಲಿ ಉತ್ತರ ಕೊಡಲಿ, ಇಲ್ಲದಿದ್ದರೆ ಕನ್ನಡದಲ್ಲಿಯೇ ಉತ್ತರ ಕೊಡಲಿಕ್ಕೆ ನಮ್ಮದೇನೂ ಆಭ್ಯಂತರವಿಲ್ಲ. ಯಾವುದೇ ಮಂತ್ರಿಗಳಾಗಲಿ ಇಂಗ್ಲೀಷಿನಲ್ಲಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿದ್ದರೆ ಇಂಗ್ಲೀಷಿನಲ್ಲೇ ಉತ್ತರ ಕೊಡಲಿ. ಆದರೆ ಸಾಧ್ಯವಾದ ಮಟ್ಟಿಗೆ ಸದನದ ಹಾಗೂ ಸದಸ್ಯರ ಅನುಕೂಲಕ್ಕಾಗಿ ಯಾವ ಭಾಷೆಯಲ್ಲಿ ಪ್ರಶ್ನೆ ಕೇಳಿರುತ್ತಾರೆ ಆ ಭಾಷೆಯಲ್ಲಿ ಉತ್ತರ ಕೊಟ್ಟರೆ ಒಳ್ಳೆಯದು. ಅದಕ್ಕೆ ಯಾವುದೇ ರೀತಿಯಾದ ನಿಯಮಾವಳಿಗಳು ಇಲ್ಲ. ಹಾಗೆ ಕೊಟ್ಟರೆ ಅದು ಯಾವ ನಿಯಮಾವಳಿಗಳಿಗೂ ವಿರೋಧವಾದದ್ದು ಅಲ್ಲ. ಸಭೆಯ ನಡವಳಿಕೆಯ ಬಗ್ಗೆ ಹೇಳುವುದಾದರೆ ಇಂಗ್ಲೀಷ್ ಬರತಕ್ಕಂಥವರು ಸದಸ್ಯರ ಅನುಕೂಲಕ್ಕೆ ಇಂಗ್ಲೀಷಿನಲ್ಲೇ ಉತ್ತರ ಕೊಡಬೇಕಾಗುತ್ತದೆ. ನಾವು ಯಾವ ರೀತಿ ಜನತೆಯ ಮತವನ್ನು ಪಡೆದು ಇಲ್ಲಿಗೆ ಬಂದಿದ್ದೇವೆಯೋ ಅದೇ ರೀತಿಯಲ್ಲಿ ಇಲ್ಲಿರತಕ್ಕ ಸರ್ವರೂ ಜನತೆಯ ಮತವನ್ನು ಪಡೆದುಕೊಂಡು ಇಲ್ಲಿಗೆ ಬಂದಿದ್ದಾರೆ. ಮಾನ್ಯ ಮುಂಖ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಅವರು ಎಂದರೆ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ನಿಮ್ಮ ಜೊತೆಯಲ್ಲಿರುವುದಿಲ್ಲವೆಂದು ಹೇಳಿದರು. ಎಲ್ಲಿಯವರೆಗೆ ಅವರು ನಮ್ಮ ಜೊತೆಯಲ್ಲಿ ಇರುತ್ತಾರೋ ಅಥವಾ ಹೋಗುತ್ತಾರೋ ಅದು ಬೇರೆ ವಿಷಯ. ಅವರು ಹೋಗುವವರೆಗೆ ಯಾವುದೇ ಕಾರಣದಿಂದ ಅವರಿಗೆ ಹ್ಯೂಮಿಲಿಯೇಟ್ ಮಾಡಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನಾನು ಹೆಚ್ಚು ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಮಳ್ಳೂರು ಆನಂದರಾವ್‌ರವರು ಕೂಡ ಇಂಗ್ಲೀಷಿನಲ್ಲಿ ಉತ್ತರ ಕೊಡಲಿಕ್ಕೆ ಪ್ರತಿಭಟನೆ ಮಾಡಿದ್ದಾರೆ. ಹಿಂದೆ ಮಾನ್ಯ ಬಾಳಿಗಾರವರು ಇದ್ದ ಕಾಲದಲ್ಲಿ ಮರಾಠಿಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಇದನ್ನು ಮಾನ್ಯ ರಂಗನಾಥ್‌ರವರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ನೋಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಯಾರೇ ಒತ್ತಡ ತಂದು ಈ ಭಾಷೆಯಲ್ಲಿ ಮಾತನಾಡಬೇಕು ಅಥವಾ ಈ ಭಾಷೆಯಲ್ಲಿಯೇ ಉತ್ತರ ಕೊಡಬೇಕೆಂದು ಸದಸ್ಯರ ಹಕ್ಕು ಬಾಧ್ಯತೆಯನ್ನು ಪೊಟಕು ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಭೆಯ ಸದಸ್ಯರ ಹಕ್ಕು ಬಾಧ್ಯತೆಯನ್ನು ಹಾಗೂ ಈ ಮನೆಯ ಗೌರವವನ್ನು ಕಾಪಾಡಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ, ಆದ್ದರಿಂದ ಈ ರೀತಿಯ ಗೊಂದಲಕ್ಕೆ ಯಾರೂ ಎಡೆಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಲಂಬಿಸಿಕೊಂಡು ಹೋಗುವುದಕ್ಕೆ ಪೂರ್ವಭಾವಿಯಾಗಿ ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯದ ಬಗ್ಗೆ ಒಂದು ವಿಷಯವೇನೆಂದರೆ ಅವರ ಗೌರವದ ಬಗ್ಗೆ ಧಕ್ಕೆ ತರುವಂಥಾದ್ದು ಇದ್ದರೆ ಅದನ್ನು ಪ್ರತಿಪಾದನೆ ಮಾಡುವುದಕ್ಕೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸರಿಯಾಗಿ ಇದೆ ಎಂದು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಅಲ್ಲದೆ ಅದನ್ನು ಪ್ರತಿಪಾದನೆ ಮಾಡುತ್ತೇನೆಂದು ಕೂಡ ಹೇಳಿದ್ದಾರೆ. ಆದ್ದರಿಂದ ಈ ಸಭೆಯಲ್ಲಿ ಯಾರು ಏನು ಹೇಳಿದ್ದಾರೆ, ಕಾನೂನು ಹೇಗೆ ಇದೆ, ಇದನ್ನೆಲ್ಲಾ ನೋಡಿದರೆ ಇದು ಒಂದ ಕ್ಕೊಂದಕ್ಕೆ ಸಂಬಂಧ ಬರುತ್ತದೆಂದು ನನಗೆ ಕಾಣುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲರನ್ನೂ ಕೇಳಿಕೊಳ್ಳುವುದೇನೆಂದರೆ ಮಾನ್ಯ ಸದಸ್ಯರು ಪ್ರಿವೆಲೇಜ್ ಮೋಷನ್ ತಂದ ಮೇಲೆ ರೂಲ್ಸ್ ಪ್ರಕಾರ ಯಾವ ರೀತಿ ನಡೆದುಕೊಳ್ಳಬೇಕೋ ಆ ರೀತಿ ನಡೆದುಕೊಳ್ಳೋಣ. ಆಗ ಶ್ರೀಮಾನ್ ದೇವೇಗೌಡರು ಅದನ್ನು ಪ್ರತಿಪಾದನೆ ಮಾಡಲಿ, ಅದನ್ನು ಹೌಸ್ ಒಪ್ಪುವುದಾದರೆ ಒಪ್ಪಿಕೊಳ್ಳಲಿ ಬಿಡುವುದಾದರೆ ಬಿಡಲಿ. ಆದರೆ ಈಗ ಅದರ ಮೇಲೆ ಯಾರೂ ವಾ ಖ್ಯಾನ ಮಾಡುವುದು ಬೇಡವೆಂದು ಕೇಳಿಕೊಳ್ಳುತ್ತೇನೆ. So I am only requesting the hon. member who has raised this

issue, to raise the previlege motion according to Rules and place it before the House for discussion, but not now. Mr. Deva Gowda can support it when it comes before the House.

SRI S. R. BOMMAI.—Let us follow the procedure as suggested by the Chief Minister.

ಮಾನ್ಯ ಸಭಾಪತಿಗಳೆ, ಪ್ರಶ್ನೋತ್ತರ ವೇಳೆಯಲ್ಲಿ ಕ್ರಿಯಾಲೋಪ ಎತ್ತುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ರೂಲ್ಸ್ ಪ್ರಕಾರ ಇದಕ್ಕೆ ಸಂಬಂಧಪಟ್ಟ ಸಮಯದಲ್ಲಿ ಇದರ ಬಗ್ಗೆ ನಾವು ಮಾತ ನಾಡೋಣ. ಈಗ ಮಾತನಾಡುವುದು ಸಮಂಜಸವಲ್ಲವೆಂದು ಕಾಣುತ್ತದೆ.

MR. SPEAKER.—There is no Motion before the House. When it comes before the house Members can take part and speak.

SRI C.M. ARUMUGAM.—I will send the Motion.

SRI BHIMANNA KHANDRE.—The concerned Member has already clarified his stand. He said that he meant 'the Ruling Party' but not the House.

SRI MICHAEL S. FERNADES.—What I said was about the double standard adopted by the Ruling Party but not the house. I have already clarified and the matter is closed.

SRI C.M. ARUMUGAM.—My friend says that the matter is closed. Whether the matter is closed or not should come from the Chair but from the Member. I will bring a Motion on this matter.

SRI H.D. DEVE GOWDA.—You should know that other Members can also bring such Motions. Every Member has the right and liberty of bringing such motions.

SRI C.M. ARUMUGAM.—I have got the liberty to move a Motion.

SRI S. R. BOMMAI.—Too much leniency is being shown to Mr. Armugam Sir. This is not correct.

MR. SPEAKER.—Now the Hon'ble Minister will reply to the Calling Attention Notice.

SRI AZEEZ SAIT (Minister for Industries).—I wish to make the following Statement:—

There is shortage of cement in the country as a whole an account of a spurt in the demand. In order to meet this situation the Government of India has stopped export cement. In this situation, the allotment of cement which is made by the Chief Cement Controller of the Government of India to Karnataka is less than the quantity which is required. This shortage was experienced throughout the year 1977 and persists during the current year also. During the year 1977, the total quantity of cement alloted to Karnataka was 9,61,000 tons

which gives an average of 2,40,250 tonnes per quarter. During the Current year in the first two quarters, the allotment has been of the order of 2.85 and 2.79 lakh tonnes respectively. Karnataka which has a large number of Irrigation and Power Projects, requires nearly 1,50,000 tonnes, per quarter, for such major works alone. The demand for Cement by the public is also very high both in Bangalore and in many of the Districts. Thus the allocation of even 2·80,000 tonnes is quite insufficient to meet the full demand for cement in the State which may be of the order of nearly 4 lakh tonnes.

It is our experience that the entire quantity of cement which is allotted in any quarter is seldome supplied. During the year 1977 as against 9,61,000 tonnes alloted 8,21,000 tonnes were actually supplied. There are many reasons for this state of affairs. In the first place, there was some shortfall in production in the factories of Karnataka because of the power cut. This has been remedied by arranging for additional power to cement factories in the State from Maharashtra in return for such 70% of the additional production of cement has to be supplied to Maharashtra.

Secondly, there have been severe restrictions in movement by the Railways which are particularly affecting Karnataka because of the considerable length of metergauge lines in our State which often necessitate transhipment. The difficulties in Railway movement are accentuated because of allotment of 1/3rd of our quota from factories in Tamilnadu which are situated at fairly distance places.

Thirdly, some of the major consumers of cement are the Irrigation and Power Projects in North Kanara which suffer the most from Railway bottlenecks and are further affected by the fact that cement produced in the factories in North Kanara are alloted also to the neighbouring States like Maharashtra and Andhra Pradesh. In the second quarter, however, the performance of the Railways in this sector has deteriorated for reasons many of which are beyond the control of the Railway Authorities. As a result the movement of cement in the first two months of the quarter *viz.*, April and May has been hardly $\frac{1}{2}$ the quantity alloted for the Department, the other $\frac{1}{2}$ to be moved in the month of June. In order to step up the movement, both the public works agencies and the free sale stockists are being persuaded to move as much as possible by road. In order to facilitate road movement the retail pri es were revised so as to provide for transport charges by road, upto a distance of 1000 k.m.

Although the State Government requested for supply of imported cement in large quantities from Madras, Mangalore and Goa ports, the Government of India allotted only 54.000 tonnes, out of which 45503 tonnes have been received.

In the matter of distribution of the cement allotment the policy is to reserve ½ the allotment for Government works and institutions and the other ½ is being given for free sale to the public. Of the total quantity available for free sale, allotment is made to each District to meet the requirements as far as possible. The greatest demand being in Bangalore District, nearly 1/3rd of the total cement alloted for free sale is given to Bangalore District. For reasons which have been explained by me earlier neither demand for public works and institutions and industries nor the demand for free sale of cement can be fully or satisfactorily met with the available supply. Instructions have been given to the stockists to ensure that the cement is sold only to bonafide consumers wich referrence to their sanctioned plan from the Local Authority and not to supply more than 100 bags to any individual at one time. The working of the stockists is being watched and complaints investigated. Action is being taken to penalise stockists found guilty of malpracties.

The Central Government has been approached to increase the allotment of cement in Karnataka in consideration of its needs for on going projects and public consumption. This is the best way of improving the situation and we have reason to believe that our request for a higher allotment would be favourably considered in the coming quarter. Frequent discussions are being held with the authorities in the Government of India including the Railways to improve the movement of cement from the factries to the consuming points.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಹೇಳಿಕೆ ಕೊಟ್ಟಿರುವುದರಿಂದ ಪರಿಸ್ಥಿತಿ ಸರಿಯೋಗುತ್ತದೆ ಏನ್ನತಕ್ಕಂಥಾದ್ದೇನೂ ನನಗೆ ಕಾಣುತ್ತಾ ಇಲ್ಲ. ಇದರಲ್ಲಿ ಮುಖ್ಯವಾಗಿರತಕ್ಕಂಥ ವಿಚಾರವೇನೆಂದರೆ ಒಂದು ಮೂಟೆ ಸಿಮೆಂಟ್‌ಗೆ ೨೧–೨೨ ರೂಪಾಯಿಗಳು ಇರತಕ್ಕಂಥಾದಕ್ಕೆ ೩೨–೩೫ ರೂಪಾಯಿಗಳನ್ನು ಕೊಟ್ಟರೆ ಏಷ್ಟು ಮೂ ? ಬೇಕಾದರೂ ಸಿಕ್ಕುತ್ತದೆ ಏನ್ನತಕ್ಕಂಥ ಆಂಶ ಇರುವ ಸಂದರ್ಭದಲ್ಲಿ ಇದರಿಂದ ಕನ್‌ಸ್ಯೂಮರ್ಸ್‌ಗೆ ಬಹಳ ಕಷ್ಟವಾಗುತ್ತದೆ. ಅಲ್ಲದೇ ಸಿಮೆಂಟ್ ಡಿಸ್ಟ್ರಿಬ್ಯೂಷನ್‌ನಲ್ಲೂ ತೊಂದರೆ ಇದೆ ಎಂದು ಕಾಣುತ್ತದೆ. ಆದ್ದರಿಂದ ಇದು ಹೇಗೆ ೩೫ ರೂಪಾಯಿಗಳಿಗೆ ಸಿಕ್ಕುತ್ತದೆ, ಒಂದೇ ನಿಖರವಾದ ಬೆಲೆಗೆ ಏತಕ್ಕೆ ಸಿಕ್ಕುವುದಿಲ್ಲ ಏನ್ನತಕ್ಕಂಥಾದ್ದು ಒಂದು ಪ್ರಶ್ನೆ. ಆದರ ಜೊತೆಗೆ ಸಿಮೆಂಟ್ ಗೋಡೌನ್‌ಗೆ ನೇರವಾಗಿ ಬರುವುದಿಲ್ಲ; ರೈಲ್ವೆಸ್ಟೇಷನ್‌ನಲ್ಲೇ ಸಿಮೆಂಟ್ ಹಂಚಿಬಿಡುತ್ತಾರೆ. ಈ ಬಗ್ಗೆ ಸಿಮೆಂಟನ್ನು ಗೋಡೌನ್‌ಗೆ ತರಬೇಕಾದರೆ ಏನು ಮಾಡಬೇಕು ಆದನ್ನು ಹೇಗೆ ಹಂಚಬೇಕು ಎಂಬುದರ ಬಗ್ಗೆ ತಾವು ವಿಚಾರಮಾಡತಕ್ಕಂಥಾದ್ದು ಒಳ್ಳೆಯದು. ಈ ಸಿಮೆಂಟಿನ ವಿಷಯದಲ್ಲಿ ಕಳೆದ ೧½ ವರ್ಷಗಳಿಂದ ಹೆಚ್ಚಿನ ಕೊರತೆ ಇರತಕ್ಕಂಥಾದ್ದು ಸರ್ಕಾರಕ್ಕೂ ಗೊತ್ತಿದೆ. ಆದರೂ ಕೂಡ ರೈಲ್ವೆ ಮೂವ್‌ಮೆಂಟ್‌ನಲ್ಲಿ ಅಡಚಣೆ ಆದಾಗ ಮತ್ತು ಕೆಲವು ಸಾರಿ ಸಿಮೆಂಟ್ ಫ್ಯಾಕ್ಟರಿಗಳು ಸ್ಟ್ರೈಕ್ ಆದಾಗ ಈಗಿರತಕ್ಕಂಥ ಕೊರತೆ ಇನ್ನೂ ಹೆಚ್ಚಾಗತಕ್ಕಂಥಾದನ್ನು ಆಗಿದಾಗ್ಗೆ ನಾವು ನೋಡುತ್ತಿದ್ದೇವೆ. ಇದರಲ್ಲಿ ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಯಾರಿಗೆ ಎಲ್ಲಾ ಕನ್‌ವಿಯನ್ಸ್ ಇದೆಯೋ ಹೀಗೆ ಇದೆಯೋ ಅವರು ಸಂಬಂಧಪಟ್ಟ ಕಛೇರಿಯಿಂದ ಆರ್ಡರ್ ತೆಗೆದುಕೊಂಡು ಬಂದು ತಮಗೆ ಏಷ್ಟು ಬೇಕಾದರೂ ಸಿಮೆಂಟನ್ನು ತೆಗೆದುಕೊಳ್ಳುತ್ತಾರೆ. ಹೆಚ್ಚು ಹಣವನ್ನು ವಿನಿಯೋಗ ಮಾಡುವುದಕ್ಕೆ ಶಕ್ತಿ ಇಲ್ಲದವರು; ಎಲ್ಲಾ ಕನ್‌ವಿಯನ್ಸ್ ಇಲ್ಲದವರಿಗೆ ಇದರಿಂದ ಕಷ್ಟವಾಗುತ್ತಾ ಇದೆ. ಆದ್ದರಿಂದ ಅಪರಿಶರ ರಿಕ್ವೈರ್‌ಮೆಂಟ್ಸ್‌ಗೆ ತಕ್ಕಂತೆ ಸಿಮೆಂಟನ್ನು ಹಂಚುವುದಕ್ಕೆ ಏನಾದರೂ ಕಾರ್ಯಕ್ರಮವನ್ನು

ತಾವು ತೆಗೆದುಕೊಳ್ಳುತ್ತೀರಾ ? ಈಗ ಸಿಮೆಂಟ್ ಕೊರತೆ ಬಹಳವಾಗಿ ಇರುವುದರಿಂದ ನಮ್ಮ ರಾಜ್ಯದಲ್ಲಿ ಸಿಮೆಂಟ್ ಉತ್ಪನ್ನವನ್ನು ಸಾಕಾದಷ್ಟು ಹೆಚ್ಚು ಮಾಡುವುದಕ್ಕೆ ಅವಕಾಶವಿರುವುದರಿಂದ ಒಂದೆರಡು ಸಿಮೆಂಟ್ ಫ್ಯಾಕ್ಟರಿಗಳಾದರೂ ಸಿಮೆಂಟ್ ಪ್ರೊಡಕ್ಷನ್ ಹೆಚ್ಚುವಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ಬಗ್ಗೆ ವಿವರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ ಸಿಮೆಂಟ್ ಹಂಚಬೇಕು ಎಂದು ತಾವು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂದು ಪೇಪರ್‌ನಲ್ಲಿ ನಾವು ಓದಿದ್ದೇವೆ. ಈ ರೀತಿ ಸಿಮೆಂಟ್ ಒಂದೇ ಕಡೆ ಸಿಕ್ಕಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಾ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ತೆಗೆದುಕೊಂಡು ಬಂದು ಹೆಚ್ಚು ಸಿಮೆಂಟ್ ಉತ್ಪಾದನೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ಸಿಮೆಂಟ್ ಸರಿಯಾದ ರೀತಿಯಲ್ಲಿ ಹಂಚಿಕೆಯಾಗತಕ್ಕಂಥವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವವರ ಬಗ್ಗೆ ವಿವರಣೆ ಕೊಟ್ಟರೆ ಒಳ್ಳೆಯದು.

ಶ್ರೀ ಟಿ. ರಾಮದೇವ್.—ನಾನು ಈ ಸಿಮೆಂಟ್ ವಿಚಾರದಲ್ಲಿ ಒಂದೆರಡು ವಿವರಗಳನ್ನು ಮಾತ್ರ ಮಾನ್ಯಮಂತ್ರಿಯವರಿಂದ ಕೇಳಬಯಸುತ್ತೇನೆ. ಸಿಮೆಂಟನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಕೆಲವರು ಮಾರುತ್ತಿದ್ದಾರೆ ಎನ್ನತಕ್ಕಂಥ ವಿಷಯ ಮಂತ್ರಿಗಳಗಮನಕ್ಕೆ ಬಂದಿದೆ, ಈಗಾಗಲೇ ಅದನ್ನು ತಪ್ಪಿಸುವುದಕ್ಕೆ ಸಹಕಾರ ಸಂಘಗಳ ಮುಖಾಂತರ ಸಿಮೆಂಟ್ ಹಂಚುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರತಕ್ಕಂಥಾದ್ದು ಬೆಂಗಳೂರಿನಲ್ಲಿ ಮತ್ತು ಇತರ ಕಡೆಗಳಲ್ಲಿ ಸಜೆಯುತ್ತಿದೆ ನನಗೆ ತಿಳಿದಹಾಗೆ ಗೂಡ್ಸ್‌ಷೆಡ್‌ನಲ್ಲಿ ಅಲ್ಲಿ ಸಿಮೆಂಟ್ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಾಟವಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರಿಗೆ ಶಕ್ತಿ ಸಾಮರ್ಥ್ಯ ಇದೆಯೇ ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ ಎಷ್ಟು ಮಂದಿ ಸ್ಟಾಕಿಸ್ಟರಿಗೆ ಪೆನಾಲ್ಟಿ ಮಾಡಿದ್ದೀರಿ, ಎಷ್ಟು ಜನರ ಮೇಲೆ ಕ್ರಮತೆಗೆದುಕೊಂಡಿದ್ದೀರಿ? ಇನ್ನು ತಿನೆಯದಾಗಿ ಈ ಸ್ಮಾಲ್ ಕನ್‌ಸೂಮರ್ಸ್ ಅಂದರೆ ೨-೩ ಬ್ಯಾಗ್ ಸಿಮೆಂಟ್ ತೆಗೆದುಕೊಳ್ಳತಕ್ಕಂಥವರಿಗೆ ಸಿಮೆಂಟ್ ಹಂಚಲು ಮಾಡಿದ ವ್ಯವಸ್ಥೆ ಏನು ? ಮಳೆಗಾಲ ಬರುತ್ತದೆ, ಮನೆ ರಿಪೇರಿ ಮಾಡಬೇಕಾಗುತ್ತದೆ. ಇಂಥವರಿಗೆ ಕೊಡುವುದಕ್ಕೆ ಹಿಂದೆ ಪರ್ಮಿಟ್ ಸಿಸ್ಟಂ ಅನ್ನು ಮಾಡಿದ್ದರು. ಈ ಪದ್ಧತಿಯಲ್ಲಿ ಅದರಲ್ಲಿ ಅಲ್ಪಸ್ವಲ್ಪ ಕರಪ್‌ಷನ್ ಇದ್ದರೂ ಸ್ಮಾಲ್ ಕನ್‌ಸ್ಯೂಮರ್ಸ್‌ಗೆ ಸಿಮೆಂಟ್ ಸಿಕ್ಕುತ್ತಿತ್ತು. ಈಗ ಅವರಿಗೆ ಸಿಮೆಂಟ್ ಸಿಕ್ಕುತ್ತಾ ಇಲ್ಲ. ಆದ್ದರಿಂದ ಅವರಿಗೂ ಸಿಮೆಂಟ್ ಸಿಕ್ಕುವಂತೆ ಇದನ್ನು ರೀ ಇಂಟ್ರಡ್ಯೂಸ್ ಮಾಡುತ್ತೀರಾ ಎನ್ನುವುದರ ಬಗ್ಗೆ ವಿವರ ಕೇಳುತ್ತೇನೆ.

೧೦-೩೦ ಎ.ಎಂ.

ಶ್ರೀ ಅಜೀಜ್ ಸೇಠ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಟಿ. ಆರ್. ಶಾಮಣ್ಣನವರು ಮತ್ತು ಶ್ರೀ ಪಿ. ರಾಮದೇವ್ ಅವರು ಹ್ಯಾಗನ್ ಬಳಿಯಲ್ಲಿಯೇ ಸಿಮೆಂಟ್ ಬ್ಲಾಕ್‌ಮಾರ್ಕೆಟ್ ಆಗುತ್ತಿರುವುದರ ಬಗ್ಗೆ ಹೇಳಿದ್ದಾರೆ; ಅದು ನಿಜ. ಸಿಮೆಂಟಿನ ಓಪನ್ ಸೇಲ್ ಇರುವುದರಿಂದ, ಇವರನ್ನು ತೀವ್ರವಾಗಿ ಹತೋಟಿ ತರುವುದು ಸ್ವಲ್ಪ ಕಷ್ಟ. ಮುನಿರೆಡ್ಡಿ ಪಾಳ್ಯದಲ್ಲಿ ಸಿಮೆಂಟಿನ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ ಎಂದು ನಮ್ಮ ಗಮನಕ್ಕೆ ಬಂದ ತಕ್ಷಣ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರು ಸಾಕ್ಷ್ಯಡ್ ನೊಂದಿಗೆ ಸ್ವತಃ ಹೋಗಿ ನೋಡಿದ್ದಾರೆ. ಮನೆ ಕಟ್ಟುವುದಕ್ಕೆ ಎಂದು ನಗರ ಸಭೆಯಿಂದ ಲೈಸೆನ್ಸ್ ಪಡೆದುಕೊಂಡು ಅಲ್ಲಿ ಸಿಮೆಂಟನ್ನು ಮಾರಾಟ ಮಾಡುತ್ತಿದ್ದರು. ಕೇಳಿದರೆ, ಮನೆ ಕಟ್ಟುವುದಕ್ಕಾಗಿ ಸಿಮೆಂಟನ್ನು ಉಪಯೋಗಿಸುತ್ತಿದ್ದೇವೆ, ಮಾರಾಟ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಆದರೆ, ಮನೆಗೆ ಮುಂದುಗಡೆಯ ದಾರಿಯಲ್ಲಿ ಬಿದ್ದಿರುವ ಸಿಮೆಂಟಿನ ಧೂಳು, ಅಲ್ಲಿ ಸಿಮೆಂಟಿನ ಮಹಿಮಾಟ ನಡೆಯುತ್ತಿತ್ತು ಎನ್ನುವುದನ್ನು ಪ್ರೇರ್ಯವಾಗಿಸುತ್ತದೆ. ಇದನ್ನೆಲ್ಲ ನೋಡಿ, ನೋಡಿ ಬೆಂಗಳೂರು ಮತ್ತಿತರ ಕಡೆಗಳಲ್ಲಿ ಏಪ್ರಿಲ್ ತಿಂಗಳಿನಲ್ಲಿ ಮೂವರು ಡೀಲರುಗಳನ್ನು ಜುಲೈ-ಸೆಪ್ಟೆಂಬರ್‌ನಲ್ಲಿ ಇಬ್ಬರು ಡೀಲರುಗಳನ್ನೂ, ಅಕ್ಟೋಬರ್-ಡಿಸೆಂಬರ್‌ನಲ್ಲಿ ಒಂಬತ್ತು ಡೀಲರುಗಳನ್ನೂ ಮತ್ತು ಏಪ್ರಿಲ್-ಜೂನ್‌ನಲ್ಲಿ ಮೂವರು ಡೀಲರುಗಳನ್ನು ಸಸ್ಪೆಂಡ್ ಮಾಡಲಾಗಿದೆ. ಡೀಲರುಗಳ ಸಸ್ಪೆಂಡುಗಳನ್ನು ಬಹುಪಾಲು ಬೆಂಗಳೂರಿನಲ್ಲಿ ಮಾಡಲಾಗಿದೆ. ಅದೇ ರೀತಿ ಮೈಸೂರು ಮತ್ತು ಮಂಗಳೂರಿನಲ್ಲೂ ಮಾಡಲಾಗಿದೆ. ಬಂಗಾಲ ಸರ್ಕಾರದವರು, ಮಾರಾಟಗಾರರ ಮೂಲಕ ಸಿಮೆಂಟಿನ ಮಾರಾಟ ವಿಧಾನವನ್ನು ತಪ್ಪಿಸಿ, ಸರ್ಕಾರವೇ ಮಾರಾಟ ಮಾಡಬೇಕೆಂದು ನಿಯಮ ಹಾಕಿಕೊಂಡಿದೆ. ಸಿಮೆಂಟಿನ ಮಾರಾಟವನ್ನು ಸಹಕಾರ ಸಂಘಗಳ ಮತ್ತು ನಾಗರೀಕ ಸರಬರಾಜು ಸಂಸ್ಥೆ ಮೂಲಕ ಮಾಡಿಸೋಣವೆಂದರೆ, ಇಂದು ಅವುಗಳು ಮಾಡು

ತ್ತಿರುವ ಆಗತ್ಯ ವಸ್ತುಗಳ ವಿತರಣಾ ಕ್ರಮವು ಎಷ್ಟರಮಟ್ಟಿಗಿದೆ ಎನ್ನುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಈಗ ರಾಜಾಜಿನಗರದ ಸಹಕಾರ ಸಂಘದಲ್ಲಿ ಮತ್ತು ಸಿಪ್ಸನ್ ಗ್ರೂಪ್‌ನಲ್ಲಿ ಸಿಮೆಂಟಿನ ಮಾರಾಟಕ್ಕೆ ಲೈಸೆನ್ಸ್ ಕೊಡಲಾಗಿದೆ. ಅಷ್ಟೇ ಅಲ್ಲದೆ, ಸಿ.ಒ.ಡಿ. ಯಿಂದ ಯಾವ ಯಾವ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಮಾಹಿತಿ ತರಿಸಿಕೊಂಡು ಅವುಗಳಿಗೆ ಡೀಲರ್‌ಷಿಪ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದುದರಿಂದ, ಡೀಲರುಗಳು ಸರಿಯಾಗಿ ಸಿಮೆಂಟನ್ನು ಮಾರಾಟ ಮಾಡದಿದ್ದರೆ, ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಮ್ಮ ರಾಜ್ಯಕ್ಕೆ ಒಂದು ಕ್ವಾರ್ಟರ್‌ಗೆ ಸುಮಾರು ೨,೮೦,೦೦೦ ಟನ್ನುಗಳಷ್ಟು ಸಿಮೆಂಟನ್ನು ಅಲಾಟ್ ಮಾಡಲಾಗುತ್ತಿದೆ. ಇದರಲ್ಲಿ, ೧,೪೦,೦೦೦ ಟನ್ನುಗಳನ್ನು ಮುಕ್ತ ಮಾರುಕಟ್ಟೆಗೆ ಬಿಡಲಾಗುತ್ತಿದೆ ಮತ್ತು ೧,೪೦,೦೦೦ ಟನ್ನುಗಳಷ್ಟು ಲೋಕೋಪಯೋಗಿ ಇಲಾಖೆ ಮತ್ತಿತರ ಸರ್ಕಾರಿ ಕಾರ್ಯಗಳಿಗಾಗಿ ಮೀಸಲಿಡಲಾಗಿದೆ. ಈಗ ನಮ್ಮ ರಾಜ್ಯಕ್ಕೆ ಅಲಾಟ್ ಮಾಡುತ್ತಿರುವ ಸಿಮೆಂಟಿನ ಪ್ರಮಾಣ ಸಾಲುತ್ತಿಲ್ಲ.

ಇತ್ತೀಚೆಗೆ, ರೈಲ್ವೆ ಮೂಲಕ ಸಿಮೆಂಟು ತರಿಸುತ್ತಿದ್ದುದನ್ನು ಲಾರಿ ಮೂಲಕ ತರಿಸಬೇಕೆಂದು ತೀರ್ಮಾನ ಮಾಡಿ, ಅದರ ಬಗ್ಗೆ ರೇಟ್ ವರ್ಕ್‌ಔಟ್ ಮಾಡಲಾಗಿದೆ. ಬಹುಶಃ, ಒಂದು ಸಾವಿರ ಕಿಲೋ ಮೀಟರು ದೂರದಿಂದ ಲಾರಿ ಮೂಲಕ ಸಾಗಿಸಿದರೆ, ಒಂದು ಮೂಟೆ ಸಿಮೆಂಟಿಗೆ ೨೨ ರೂಪಾಯಿ ಬೀಳುವ ಬದಲು ೨೪ ರೂಪಾಯಿ ಬೀಳುತ್ತದೆ. ೩೫-೪೦ ರೂಪಾಯಿ ಕೊಟ್ಟು ಬ್ಲಾಕ್ ಮಾರ್ಕೆಟಿನಲ್ಲಿ ಒಂದು ಮೂಟೆ ಸಿಮೆಂಟ್ ಪಡೆಯುತ್ತಿರುವಾಗ, ಎರಡು ರೂಪಾಯಿ ಹೆಚ್ಚಾದರೆ ಅಷ್ಟೇನೂ ಕಷ್ಟವಾಗುವುದಿಲ್ಲ. ಲಾರಿಗಳ ಮೂಲಕ ಸಿಮೆಂಟನ್ನು ಸಾಗಿಸುವ ಕುರಿತು ಕೇಂದ್ರ ಸರ್ಕಾರದ ಸಚಿವರೊಂದಿಗೆ ಮತ್ತು ಚೈರೆಕ್ಟರ್ ಆಫ್ ಸಿಮೆಂಟ್ ಅವರೊಂದಿಗೆ ಮಾತನಾಡಲಾಗಿದೆ. ಅವರೂ ಸಹ ಅದಕ್ಕೆ ಒಪ್ಪಿಕೊಂಡಿದ್ದಾರೆ. ಅದರಂತೆ ನಾವು ಈಗ ಲಾರಿ ಮೂಲಕ ಸಿಮೆಂಟನ್ನು ಸಾಗಿಸುತ್ತಿದ್ದೇವೆ.

ನಮಗೆ ಈಗ ಅಲಾಟ್ ಮಾಡಿರುವ ೨,೮೦,೦೦೦ ಟನ್ ಸಿಮೆಂಟ್ ಸಾಲದಾಗಿರುವುದರಿಂದ, ಅದನ್ನು ೪,೦೦,೦೦೦ ಟನ್‌ಗೆ ಏರಿಸಬೇಕೆಂದು ಕೇಂದ್ರ ಸರ್ಕಾರದ ಮಂತ್ರಿಯೊಬ್ಬರೊಂದಿಗೆ ಮಾತನಾಡಿದ್ದೇನೆ. ಮತ್ತು ಆ ಕುರಿತು ಕಾಗದವನ್ನೂ ಬರೆಯಲಾಗಿದೆ. ಅಷ್ಟೇ ಅಲ್ಲದೆ, ಕೇಂದ್ರ ಸರ್ಕಾರದ ಸಚಿವರೊಂದಿಗೆ ಫೋನಿನಲ್ಲಿ ಮಾತನಾಡಲು ನಿನ್ನೆಯಿಂದ ಪ್ರಯತ್ನ ಪಡುತ್ತಿದ್ದೇನೆ. ಇನ್ನು ಏರಡು ಮೂರು ದಿವಸದಲ್ಲಿ ನಮ್ಮ ರಾಜ್ಯಕ್ಕೆ ಹೆಚ್ಚು ಸಿಮೆಂಟ್ ಅಲಾಟ್ ಮಾಡುವ ವಿಷಯದಲ್ಲಿ ನಾನು ಪ್ರಯತ್ನ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲದೆ, ಎಲ್ಲಾದರೂ ಸಿಮೆಂಟಿನ ಬ್ಲಾಕ್‌ಮಾರ್ಕೆಟ್ ಆಗುತ್ತಿರುವುದು ಕಂಡುಬಂದರೆ ಅದನ್ನು ದಯಮಾಡಿ ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಾರ್ವಜನಿಕರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ದ್ಯಾಗನ್ ಹತ್ತಿರವೇ ಆಗುತ್ತಿರುವ ಬ್ಲಾಕ್‌ಮಾರ್ಕೆಟನ್ನು ತಪ್ಪಿಸುವುದಕ್ಕೆ ನಾವು ವಿಂತಿತ ಪರ್ಹಾಡು ಮಾಡುತ್ತೇವೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರಿಗೆ ಆಸಕ್ತಿ ಅಥವಾ ಸಾಮರ್ಥ್ಯ ಇಲ್ಲವೆಂದಲ್ಲ; ಆಸಕ್ತಿ ಮತ್ತು ಸಾಮರ್ಥ್ಯ ಎರಡೂ ಇದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಆಸಕ್ತಿಯೆ ?

ಶ್ರೀ ಆಜೀಜ್ ಸೇಠ್. ಆಸಕ್ತಿಗೂ ಅಶಕ್ತಿಗೂ ಇರುವ ವ್ಯತ್ಯಾಸ ನನಗೆ ಗೊತ್ತು. ಮಾನ್ಯ ಸದಸ್ಯರು ಆ ರೀತಿ ಕುಚೋದ್ಯ ಅಥವಾ (***) ಮಾಡುವುದಕ್ಕೆ ಹೋಗಬಾರದು. It is the bounden duty and responsibility of the Hon. Member to correct me and not to tease me. I am very sorry...

* * * * * *

(Interruptions by Several Members)

SRI C. M. IBRAHIM.—He cannot instruct me. He has no right.

SRI S.R. BOMMAI. —The Hon. Minister has used the word (*** ***) Is it a parliamentary word ?

*** Word/words expunged as ordered by the Chair.

ಅಧ್ಯಕ್ಷರು.—ಮಾನ್ಯ ಸದಸ್ಯರು ಮತ್ತು ಮಾನ್ಯ ಸಚಿವರಿಬ್ಬರೂ ಮಾತನಾಡಿರುವುದನ್ನು ನಾನು ವರದಿ ತರಿಸಿ ನೋಡುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ. — ಮಂತ್ರಿಗಳಾಗಿರುವ ನಿಮಗೆ ಪಾರ್ಲಿಮೆಂಟರಿ ಪ್ರೊಸೀಜರ್ ಗೊತ್ತಿಲ್ಲ; (*** ***) ನನಗೆ ಬೆದರಿಕೆ ಹಾಕುವುದು ಹೊರಗಡೆ ಇಟ್ಟುಕೊಳ್ಳಿ; ಇಲ್ಲಿ ಬೆದರಿಕೆ ಹಾಕಬೇಡಿ.

ಶ್ರೀ ಜೀಜ್ ಸೇಠ್.—ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೊಳ್ಳುವುದನ್ನು ಕಲಿಯಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸಚಿವರು ಬೇಷರತ್ ಕ್ಷಮಾಪಣೆ ಕೇಳಬೇಕು. ಇಲ್ಲದಿದ್ದರೆ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಬೇಕು. ಅವರು ಕ್ಷಮಾಪಣೆ ಕೇಳದಿದ್ದರೆ ನಾವು ಗಲಾಟೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ತಾವಿಬ್ಬರೂ ಮಾತನಾಡಿರುವುದನ್ನು ನಾನು ವರದಿ ತರಿಸಿ ನೋಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ನೇರವಾಗಿ ಮಾನ್ಯ ಸಚಿವರೊಂದಿಗೆ ಸಭೆಯಲ್ಲಿ ಮಾತನಾಡುವುದನ್ನು ತಡೆಹಿಡಿಯಬೇಕು. ಮಾನ್ಯ ಸದಸ್ಯರು ಮಾತನಾಡುವಾಗ ಮಾನ್ಯ ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕೆಂದು ನಿಯಮ ಇದೆ. ಆಕಸ್ಮಾತ್ ಒಂದೆರಡು ಅಚಾತುರ್ಯಗಳು ಆದರೆ, ಅದಕ್ಕೆ ಕ್ಷಮಾಪಣೆ ಕೇಳಬೇಕಾಗುತ್ತದೆ. ಆದರೆ, ತಾವು ಈ ರೀತಿ ಆಗುವುದನ್ನು ತಪ್ಪಿಸದೇ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು, ಇನ್ನೊಬ್ಬರು ಮಾತನಾಡುವಾಗ ಸ್ವಲ್ಪ ತಾಳ್ಮೆಯಿಂದ ಕುಳಿತು ಕೇಳಬೇಕು; ತಾಳ್ಮೆ ಕಳೆದುಕೊಂಡ ಮೇಲೆ ಅದು ಎಲ್ಲಿಗೆ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಕಡೆಯ ಸದಸ್ಯರಿಗೆ ಹೇಳಿ, ಅವರನ್ನು ಕಂಟ್ರೋಲ್ ಮಾಡಿದರೆ ಬಹಳ ಒಳ್ಳೆಯದು. I am only addressing the Chair. I am not addressing the Hon. Member. We will take that responsibility to see that our members also show that respect. ತಾವೂ ಪ್ರತಿ ಸಲವೂ ರೆಕಾರ್ಡ್ ತರಿಸಿ ನೋಡುತ್ತೇನೆ ಎಂದು ಹೇಳಿದರೆ, ಒಮ್ಮೆಲೆ ಐದಾರು ಜನ ಮಾನ್ಯ ಸದಸ್ಯರುಗಳು ಮಾತನಾಡುವಾಗ ವರದಿಗಾರರು ಏನು ತಾನೆ ಬರೆದುಕೊಳ್ಳುವುದಕ್ಕಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಂಸದೀಯ ಸಚಿವರು ಹೇಳಿರುವುದು ಎರಡು ಕಡೆಯ ಮಾನ್ಯ ಸದಸ್ಯರಿಗೂ ಅನ್ವಯವಾಗುತ್ತದೆ. ನಾವು, ನಮ್ಮ ಕಡೆಯ ಸದಸ್ಯರನ್ನು ಕಂಟ್ರೋಲ್ ಮಾಡುತ್ತೇವೆ. ಆದರೆ, ಮಾನ್ಯ ಸಂಸದೀಯ ಸಚಿವರು, ಅವರ ಕಡೆಯ ಮಂತ್ರಿಗಳನ್ನು ಮೊದಲು ಕಂಟ್ರೋಲ್ ಮಾಡಬೇಕು; ಏಕೆಂದರೆ, ಅವರ ಮೇಲೆ ಹೆಚ್ಚು ಜವಾಬ್ದಾರಿ ಇರುತ್ತದೆ.

SRI K. H. RANGANATH.—I never meant any exception to anybody. We are first Members and then Ministers.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಕಡೆಯ ಸದಸ್ಯರು ಏನಾದರೂ ಮಾತನಾಡಲಿಕ್ಕೆ ಎದ್ದಾಗ ಅವರನ್ನು ಕಂಟ್ರೋಲ್ ಮಾಡಬೇಕೆಂದು ಮಾನ್ಯ ಸಂಸದೀಯ ಸಚಿವರು ಹೇಳುತ್ತಾರೆ. ಆದರೆ, ಅವರ ಕಡೆಯ ಸದಸ್ಯರು ಮಾತನಾಡಲು ಎದ್ದಾಗ ಅವರು ಹಾಗೆ ಹೇಳದಿರುವುದು ನಮಗೆ ಬೇರೆ ಅರ್ಥವಾಗುತ್ತದೆ. He must pull down his own party members or the Hon. Ministers whenever they go out of the way.

MR. SPEAKER.—When the Members go out of the way, I have to request them to conduct themselves.

ಸಭೆಯ ನಿಯಮಗಳಿಗೆ ಮೊದಲು ಗೌರವ ಕೊಡಬೇಕು. ಇಲ್ಲದೆ ಇದ್ದರೆ ಈ ಕಡೆಯ ಸದಸ್ಯರಿಗೂ ಗೌರವ ಬರುವುದಿಲ್ಲ. ಆ ಕಡೆಯ ಸದಸ್ಯರಿಗೂ ಗೌರವ ಬರುವುದಿಲ್ಲ. ಯಾವ ಕಡೆಯ ಸದಸ್ಯರಾದರೂ ನೇರವಾಗಿ ನನ ಕಡೆ ನೋಡಿಕೊಂಡು ಮಾತನಾಡಬೇಕಾಗುತ್ತದೆ. ನೀವು ಮಾತನಾಡತಕ್ಕ ವಿಷಯ ವನ್ನು ನನ್ನ ಗಮನಕ್ಕೆ ತನ್ನಿ. ಆದರ ಬಗೆ ನಾನು ತೀರ್ಮಾನ ಮಾಡುತ್ತೇನೆ.

*** Word/words expunged as ordered by the Chair.

ಶ್ರೀ ಪಿ. ರಾಂದೇವ್.—ಒಂದು ಬ್ಯಾಗ್, ೫ ಬ್ಯಾಗ್, ೧೦ ಬ್ಯಾಗ್ ಸಿಮೆಂಟ್ ಕೇಳುವವರಿಗೆ ಯಾವರೀತಿ ಅನುಕೂಲ ಮಾಡಿಕೊಡುತ್ತೀರಿ ?

ಶ್ರೀ ಆಜೀಜ್ ಸೇಠ್.—ಸಣ್ಣ ಪುಟ್ಟ ಬಳಕೆದಾರರಿಗೆ ಸಿಮೆಂಟ್ ದೊರೆಯುವ ವ್ಯವಸ್ಥೆ ಬಗ್ಗೆ ಸರಿಯಾದ ವ್ಯವಸ್ಥೆ ಮಾಡುತ್ತೇವೆ. ಸಣ್ಣ ವ್ಯಾಪಾರಗಾರರಿಗೆ ಜಿಲ್ಲಾಧಿಕಾರಿಗಳು ಪರ್ಮಿಟ್ ಜಾಯಿಂಟ್ ಡೈರೆಕ್ಟರವರು ಪರವಾನಗಿ ಕೊಡುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ರೈಲ್ವೆ ಸ್ಟೇಷನ್ನಿಗೆ ಬಂದಂತ ಸಿಮೆಂಟ್ ಎಷ್ಟು ? ಅದನ್ನು ಅಲ್ಲೇ ಹಂಚುತ್ತಾರೆಯೆ ? ಗೋಡೌನ್‌ಗೆ ತಂದು ಯಾರು ಯಾರಿಗೆ ಕೊಟ್ಟಿದ್ದಾರೆಂಬ ಬಗ್ಗೆ ತನಿಖೆ ಮಾಡಿಸುತ್ತೀರಾ ?

ಶ್ರೀ ಪೆಚ್. ಡಿ. ದೇವೇಗೌಡ.—ತನಿಖೆ ಮಾಡಬೇಕಾದ್ದು ಏನೂ ಇಲ್ಲ; ತನಿಖೆ ಆದರೂ ಕೂಡ ಮತ್ತೆ ಅದನ್ನು ಕ್ಯಾಬಿನೆಟ್ ತಂದು ವಾಪಸ್ಸು ತೆಗೆದುಕೊಳ್ಳುತ್ತಾರೆ.

ಶ್ರೀ ಆಜೀಜ್ ಸೇಟ್.—ಸಿಮೆಂಟ್ ವಿಚಾರ ಕ್ಯಾಬಿನೆಟ್‌ಗೆ ಬಂದಿಲ್ಲ.

ಶ್ರೀ ಪೆಚ್. ಡಿ. ದೇವೇಗೌಡ.—ತಾವು ಕೈಗಾರಿಕೆಗಳ ಮಂಂತ್ರಿಗಳಾದ ಮೇಲೆ ಆಗಿಲ್ಲ. ದೇವರಾಜ ಅರಸ್‌ರವರ ಮುಖ್ಯ ಮಂತ್ರಿ ನೇತೃತ್ವದಲ್ಲಿ ಹಿಂದೆ ಆಗಿದೆ.

(ii) re: Non availability of drugs in Gulbarga General Hospital.

SRI PRABHAKAR TELKAR.—Sir, I call the attention of the Minister for Health and Family Welfare to the hardship caused to the public due to non-availability of drugs in Government Hospital, Gulbarga.

SRI M. MARGADA MALLAPPA (Minister for Health and Family Welfare).—Sir, I beg to make the following Statement.

As per G. O. No. HMA 86 BDE 77 dated 3rd November 1977, budget provision for supply of drugs and chemicals in respect of General Hospital, Gulbarga has already been enhanced from Rs. 6,00,000 to Rs. 7,00,000 per annum with effect from 1st April 1977. Due to economy cuts imposed by the Government 10% cut *i.e* Rs. 70,000 was reduced for the year 1977-78 and a sum of Rs. 3,15,000 for direct purchases (50%) and a sum of Rs. 3,15,000 (50%) for Deputy Director, Government Medical Stores have been released for the same.

The Deputy Director, Government Medical Stores, Bangalore has reported that against a provision of Rs. 3,15,000 drugs worth Rs. 3,16,195 has been supplied to the General Hospital, Gulbarga during 1977-78.

Out of a total provision of Rs. 7,00,000 allotted for the purchase of drugs and medicines during the year 1978 79 to the General Hospital, Gulbarga, a sum of Rs. 1,16,000 (for four months) has been released to the Deputy Director (Government Medical Stores) against which supplies have been made from the Government Medical Stores to the extent of Rs. 2,15,722-21 on 9th June 1978 and the same has been received at the Hospital on 12th June 1978. In addition, a sum